Sri D. DEVARAJ URS (Chief Minister).—

(*a*) Rupees Three thousand, six hundred and fortynine and fifty-paise are incurred.

(*b*) She had come to inaugurate Dr. Baliga's Surgical Unit at Manipal. During the period she also visited Sri Krishna Temple at Udipi

ಶ್ರೀ ಕೋಣಂದೂರು ಲಿಂಗಪ್ಪ.—ಉತ್ತರದಲ್ಲಿ ರೂ. 3649—50 ಪೈಸೆ ಖರ್ಚಾಗಿದೆ ಎಂದು ತಿಳಿಸಿದ್ದಾರೆ. ಇಷ್ಟು ಕಡಿಮೆ ಖರ್ಚಾಗಿರುವುದರಲ್ಲಿ ಯಾವ ಯಾವ ಬಾಬಿಗೆ ಎಷ್ಟೆಷ್ಟು ಖರ್ಚಾಗಿದೆ ತಿಳಿಸುತ್ತಾರೆಯೇ ?

† ಶ್ರೀ ಡಿ. ದೇವರಾಜ ಅರಸ್.—ಟ್ರಾನ್ಸ್‌ಪೋರ್ಟ್‌ಗಾಗಿ ಎರಡು ಸಾವಿರ ರೂಪಾಯಿಗಳು ಹಾಗೂ ಇನ್ನಿತರ ಬಾಬುಗಳ ಎಂದರೆ ಬೆಂಗಳೂರಿಂದ ಮೆಹಿಕರ್ಸ್‌ಗಳಿಗಾಗಿ 345 ರೂಪಾಯಿಗಳು, 290 ರೂಪಾಯಿಗಳು, 305 ರೂಪಾಯಿಗಳು ಮತ್ತು ಮಂಗಳೂರಿನಲ್ಲಿ ಸ್ಟಾಫ್‌ಗಾಗಿ 210 ರೂ. ಕೇಟರಿಂಗ್‌ಗಾಗಿ 25 ರೂಪಾಯಿಗಳು, ಹೀಗೆ ಇವೆಲ್ಲ ಒಟ್ಟು ಸೇರಿ ಮೂರುಸಾವಿರ ಚಿಲ್ಲರೆಯಾಗುತ್ತದೆ:

ಶ್ರೀ ಕೋಣಂದೂರು ಲಿಂಗಪ್ಪ.—ಮಂಗಳೂರು ಜಿಲ್ಲೆಯಲ್ಲಿ ಅಷ್ಟೆಯ ಶಾಸಕರನ್ನೂ ಯಾರನು ಕರೆಯದೇ ಊಟ ಹಾಕಿದ್ದಾರೆ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಬೇರೆಯವರು ಊಟ ಹಾಕಿದಾಗ ಎಲ್ಲರನ್ನೂ ಕರೆಯಬೇಕು ಎಂದು ರೂಲು ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ಪ್ರಧಾನ ಮಂತ್ರಿಗಳಿಗೆ ಊಟ ಹಾಕಿದಾಗ ಎಷ್ಟು ಜನ ಊಟಕ್ಕೆ ಸೇರಿದ್ದರು. ಅದರಲ್ಲಿ ಎಷ್ಟು ಜನ ರಾಜ್ಯ ಸರ್ಕಾರದವರು ಇದ್ದರು?

ಶ್ರೀ ಡಿ. ದೇವರಾಜ ಅರಸ್.—ಮಾಣ್‌ಪಾಲ್ ಇನ್ಸ್‌ಟ್ಯೂಟ್‌ನಲ್ಲಿ ಊಟ ಹಾಕಿದರು. ಎಷ್ಟು ಜನ ಸೇರಿದ್ದರು ಎನ್ನುವುದಕ್ಕೆ ಲೆಕ್ಕ ಇಟ್ಟಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—3649 ರೂ. ಖರ್ಚಾಗಿದೆ ಎಂದು ತಿಳಿಸಿದ್ದೀರಿ. ಆದರಲ್ಲಿ ರಕ್ಷಣಾ ಇಲಾಖೆಯ ವಿಶೇಷ ಬಂದೋಬಸ್ತಿಗಾಗಿ ಎಷ್ಟು ಖರ್ಚಾಗಿದೆ.

ಶ್ರೀ ಡಿ. ದೇವರಾಜ ಅರಸ್.— ಎಲ್ಲಾ ಸೇರಿ ಮೂರು ಸಾವಿರ ಚಿಲ್ಲರೆ ಎಂದು ಹೇಳಿದ್ದು.

ಶ್ರೀ ಎಚ್. ಎಸ್. ಸಿದ್ದಪ್ಪ. ಊಟ ಬೇರೆಯವರು ಹಾಕಿದರು, ಎಂದು ಹೇಳಿದಿರಿ. ಅದರಲ್ಲಿ ಇಷ್ಟು ಜನ ಎಂದು ಹೇಳಲಿಲ್ಲಾ. ಡಿಷಸ್ ಏನೇನು ಇತ್ತು ಎಂದು ಹೇಳುತ್ತೀರಾ ?

ಶ್ರೀ ಡಿ. ದೇವರಾಜ ಅರಸ್.—ಬೆಳ್ಳುಳ್ಳಿ ಚೆಟ್ನಿ ಇದ್ದಹಾಗೆ ಇರಲಿಲ್ಲಾ.

ಶ್ರೀ ಕೋಣಂದೂರು ಲಿಂಗಪ್ಪ. ಪ್ರಧಾನ ಮಂತ್ರಿಗಳು ಉಡುಪಿಯ ದೇವರ ದರ್ಶನ ವಾಗುವಂತೆ ಮಾಡಿದಿರಿ. ಅಲ್ಲಿ ಅವರು ಪೂಜೆ ಗೀಜೆ ಏನಾದರೂ ಮಾಡಿದರೇ ?

ಶ್ರೀ ಡಿ. ದೇವರಾಜ್ ಅರಸ್:—ಮಂಗಳಾರತಿ ಪೂಜೆ ಅನ್ನುವುದಾದರೆ ಮಂಗಳಾರತಿ ಇದ್ದೇ ಇರುತ್ತದೆ.

Smuggling of foreign Goods in Shimoga District

509. Sri S. M. SHREERNALY CHANDRASEKHAR (Hosanagar).—

Will the Chief Minister be pleased to state:—

(*a*) whether the Government is aware that smuggling of foreign goods in Shimoga district is on the increase ;

(*b*) if so, the action Goverument propose to take to prevent it ?

Sri D. DEVARAJ URS (Chief Minister).—

(*a*) and (*b*) Regulation of import of foreign goods and levy of customs duty on such goods are matters which concern the Central Government and the Parliament. State Government is not in a position to furnish the information required in the question.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ತಾವು (ಅ) ಮತ್ತು (ಆ) ಗೆ ಉತ್ತರವಾಗಿ ವಿದೇಶೀ ವಸ್ತುಗಳ ಆಮದು ಹಾಗೂ ಅವುಗಳ ಬಗ್ಗೆ ಸುಂಕ ವಿಧಿಸುವ ವಿಷಯಗಳು ಕೇಂದ್ರ ಸರ್ಕಾರದ ನಿಯಂತ್ರಣಕ್ಕೆ ಸೇರಿದ ವಿಷಯಗಳಾಗಿವೆ ಎಂದು ಹೇಳಿದ್ದೀರಿ. ನನ್ನ ಪ್ರಶ್ನೆ ಏನೆಂದರೆ ಪೋಲೀಸ್ ಇಲಾಖೆಯವರು ವಿಜಿಲೆಂಟ್ ಆಗಿದ್ದು ತಡೆ ಹಿಡಿಯುವುದಕ್ಕೆ ಆಗುವುದಿಲ್ಲವೇ. ಈಪೊತ್ತು ಗೋಲ್ಡ್, ಬಿಸ್ಕತ್ಸ್, ವಿದೇಶಿ ಮದ್ಯಪಾನಗಳು, ವಾಚಸ್ ಇವೆಲ್ಲಾ ಹೇರಳವಾಗಿ ಶಿವಮೊಗ್ಗಾದಲ್ಲಿ ಬರುತ್ತವೆ. ಅವುಗಳು ಮಾರ್ಕೆಟ್‌ನಲ್ಲಿ ಸಿಕ್ಕುತ್ತವೆ. ಅವರು ಬಿಲ್ ಕೊಡದೇ ವ್ಯಾಪಾರ ಮಾಡುತ್ತಿದ್ದಾರೆ. ಇದಕ್ಕೆ ಏನಾದರೂ ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ.

† ಶ್ರೀ ಡಿ. ದೇವರಾಜ ಅರಸ್.—ನೀವು ಸುಂಕದ ವಿಷಯ ಕೇಳಲಿಲ್ಲ. ನೀವು ಕೇಳಿದ್ದು whether the Goverument is aware that smuggling of foriegn goods in Shimoga district is on the increase' ಎಂದು ಕೇಳಿದ್ದೀರಿ ಅದಕ್ಕೆ, we have none of our business. It is Government of India business, ಎಂದು ಹೇಳಿದ್ದೇವೆ.

ಶ್ರೀ ಎಸ್. ಎಂ. ಶೀರನಾಳಿ ಚಂದ್ರಶೇಖರ್.—ಈ ರೀತಿ ಪ್ರತಿಯೊಂದು ಅಂಗಡಿಗಳಲ್ಲೂ ದೊರೆಯತಕ್ಕ ವಿದೇಶೀ ವಸ್ತುಗಳನ್ನು ತಡೆಯಲಿಕ್ಕೆ ಈ ಕೆಲಸ ಪೋಲೀಸ್ ಖಾತೆಗೆ ಒಳಪಡುವುದಿಲ್ಲವೇ?

ಶ್ರೀ ಡಿ. ದೇವರಾಜ ಅರಸ್.—ಅದು ನಮಗೆ ಇಲ್ಲ ಎಂದು ಗೊತ್ತಾಗುತ್ತದೆ. ಸೆಂಟ್ರಲ್ ಗೌರ್ನಮೆಂಟ್‌ನವರು ಪೂರ್ಣವಾಗಿ ತಮ್ಮ ಅಧಿಕಾರವನ್ನು ನಮಗೆ ಕೊಟ್ಟರೆ ಆಗ ಹಿಡಿಯುವುದಕ್ಕೆ ಪ್ರಯತ್ನ ಮಾಡೋಣ.

Horticultural Training Centres

522. **Smt. SUMATHI B. MADIMAN** (Dharawar Rural).—

Will the Minister for Agriculture and Forests be pleased to state.—

(*a*) the number of Horticultural Training Centres allotted or set up in the State ;

(*b*) whether all are working satisfactorily ?

Sri K. H. PATIL (Minister for Agriculture and Forests).—

(*a*) 17.

(*b*) Yes.

Smt. SUMATHI B. MADIMAN.—May I know whether these Centres are started in the Distrct head-quarters and if so, kindly give the names of the District head-quarters.